**ಸಾಕ್ಷಿಯನ್ನು ದಿನಾಂಕಃ 18-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ನಾನು ಈ ಕೇಸಿನಲ್ಲಿ ತಕರಾರು ಹಾಕಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ತಕರಾರಿನಲ್ಲಿ ದಿನಾಂಕ 20.10.1961 ರಲ್ಲಿ ಹುಸೇನ್ ಬೀ ರವರು ದಾವಾ ಅಸ್ತಿಯನ್ನು ಖರೀದಿ ಮಾಡಿದರು ಎಂದು ಒಪ್ಪಿಕೊಂಡಿರುತ್ತೇನೆ ಅಂದರೆ ಸರಿ. ಆದ್ದರಿಂದ ದಾವಾ ಸ್ವತ್ತು ನಮಗೆ ಸಂಬಂದಿಸಿರುವುದಿಲ್ಲ ಅಂದರೆ ಸರಿಯಲ್ಲ. ಹುಸೇನ್ ಬೀ ಈಕೆ ಕಾಸೀಂ ಸಾಬನ ಹೆಂಡತಿ ಅಂದರೆ ಸರಿ. ದಾವಾ ಸ್ವತ್ತಿನ ಖಾತವು ಹುಸೇನ್ ಬೀ ಇವರ ವಾರಸುದಾರರ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತದೆ ಅಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಸೇರಿದ್ದು ಎಂದದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಕಿರುವೆನು. ನನಗೆ ದಾವಾ ಸ್ವತ್ತಿನ ಮೇಲೆ ನನಗಾಗಲೀ 1 ರಿಂದ 5 ನೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ.

2. ದಾವಾ ಸ್ವತ್ತು ಖರೀಂ ಸಾಬ್ ತಂದ ಕೊಪ್ಪದ ಖಾಸೀಂ ಸಾಬ್ ಇವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿದ್ದೇನೆ. ಅದೇ ರೀತಿ ಇಮಾಮ್ ಸಾಬ್ ತಂದೆ ಕಳ್ಳಿಕೊಪ್ಪದ ಖಾಸೀಂ ಸಾಬ್ ಇವರ ಹೆಸರಿಲನ್ಲಿ 70 ಸೆನ್ಸ ಇತ್ತು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ಪಾತೀಮಾ ಬೀ ತಂದೆ ಕೊಪ್ಪದ ಖಾಸೀಂ ಸಾಬ ಇವರ ಹೆಸರಿನಲ್ಲಿ 1.10 ಎಕರೆ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿದ್ದೇನೆ. ಅದೇ ರೀತಿ ಮರಿಯಾಮ್ ಬೀ ಗಂಡ

**ಸಾಕ್ಷಿಯ ಸಹಿ** **18.12.2025**

ಫತ್ತರ್ ಸಾಬ್ ಇವರ ಹೆಸರಿನಲ್ಲಿ 1.10 ಎಕರೆ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿದ್ದೇನೆ. ಅದೇ ರೀತಿ ಹುಸೇನ್ ಸಾಬ್ ತಂದೆ ಕೊಪ್ಪದ ಖಾಸೀಂ ಸಾಬ್ ಇವರ ಹೆಸರಿನಲ್ಲಿ 1.10 ಎಕರೆ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿದ್ದೇನೆ. ಅದೇ ರೀತಿ ಇಮಾಮ ಅಲೀ ಸಾಬ್ ತಂದೆ ಕೊಪ್ಪದ ಖಾಸೀಂ ಸಾಬ್ ಇವರ ಹೆಸರಿನಲ್ಲಿ 0.70 ಸೆನ್ಸ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿದ್ದೇನೆ.

3. ವಿನಾಕಾರಣ ನಾವು ವಾದಿಯ ಸ್ವಾಧೀನ ಅನುಭವಕ್ಕೆ ತಕರಾರು ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** **18.12.2025**